# ಸಿಂದಗಿ ತಾಲೂಕಿನ ಕಲ್ಯಾಣಿ ಚಾಲುಕ್ಯರ ಶಾಸನೋಕ್ತ ದೇವಾಲಯಗಳು

ಎನ್.ಪಿ. ಕೋಟಿ*

DOI: https://doi.org/10.5281/zenodo.19501289

**ABSTRACT**

ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕು ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಪ್ರಮುಖ ಸಾಂಸ್ಕೃತಿಕ ಮತ್ತು ವಾಸ್ತುಶಿಲ್ಪದ ಕೇಂದ್ರವಾಗಿ ಅಭಿವೃದ್ಧಿ ಸಾಧಿಸಿತ್ತು. ಸಿಂದಗಿ ಪರಿಸರದ ಚಟ್ಟರಕಿ, ಕೊಂಡುಗುಳಿ, ದೇವರ ಹಿಪ್ಪರಗಿ, ಜಾಲವಾದ ಮತ್ತು ದೇವಣಗಾಂವಗಳಲ್ಲಿ ಲಭ್ಯವಿರುವ ಶಾಸನೋಕ್ತ ದೇವಾಲಯಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಾಗೂ ಐತಿಹಾಸಿಕ ಮಹತ್ವವನ್ನು ಇಲ್ಲಿ ಕೂಲಂಕಷವಾಗಿ ವಿಶ್ಲೇಷಿಸಲಾಗಿದೆ. ದತ್ತಾತ್ರೇಯ, ಸೋಮೇಶ್ವರ, ಕಲ್ಮೇಶ್ವರ, ಶಂಕರಲಿಂಗ ಹಾಗೂ ಕಲ್ಲಾಲಿಂಗ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಲಾ ಶ್ರೀಮಂತಿಕೆಯ ಜೀವಂತ ಸಾಕ್ಷಿಗಳಾಗಿವೆ. ಈ ದೇವಾಲಯಗಳ ಗರ್ಭಗೃಹ, ಕಕ್ಷಾಸನ ಸಹಿತ ಮುಖಮಂಟಪ, ವಿಶಾಲವಾದ ನವರಂಗ, ಆಳವಾದ ಭುವನೇಶ್ವರಿ ಹಾಗೂ ನಟರಾಜ, ಹರಿಹರ, ಸಪ್ತಮಾತೃಕೆಯರಂತಹ ಆಕರ್ಷಕ ಶಿಲ್ಪಗಳ ರಚನಾ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ. ಜೊತೆಗೆ, ಕಲ್ಯಾಣ ಚಾಲುಕ್ಯರ 6ನೇ ವಿಕ್ರಮಾದಿತ್ಯ, ಕಳಚುರಿ ಬಿಜ್ಜಳ ಹಾಗೂ ಯಾದವ ಮನೆತನದ ಅರಸರ ಶಾಸನಗಳ ಆಧಾರದ ಮೇಲೆ ಈ ಸ್ಮಾರಕಗಳ ಧಾರ್ಮಿಕ ದತ್ತಿಗಳು ಮತ್ತು ಐತಿಹಾಸಿಕ ಪರಂಪರೆಯ ಮೇಲೆ ಬೆಳಕು ಚೆಲ್ಲಲಾಗಿದೆ.

**KEYWORDS:** ಕಲ್ಯಾಣ ಚಾಲುಕ್ಯರು, ದೇವಾಲಯ ವಾಸ್ತುಶಿಲ್ಪ, ಸಿಂದಗಿ ತಾಲೂಕು, ಐತಿಹಾಸಿಕ ಶಾಸನಗಳು, ಮೂರ್ತಿಶಿಲ್ಪ.

ವಿಜಾಪುರದಿಂದ 50 ಕಿ. ಮೀ ದೂರದಲ್ಲಿರುವ ಸಿಂದಗಿಯು ಶಾಸನಗಳಲ್ಲಿ ಸಿಂದಗೆ ಅಗ್ರಹಾರ ಸಿಂದವುರ ಎಂದು ವಿವಿಧವಾಗಿ ಉಲ್ಲೇಖಗೊಂಡಿರುವ ಒಂದು ಪ್ರಾಚೀನ ಸ್ಥಳವಾಗಿದೆ. ಸ್ಥಳೀಯವಾಗಿ ಈ ಊರನ್ನು ಕ್ರಿ.ಶ 1200 ರಲ್ಲಿ ಸಿಂದು ಬಲ್ಲಾಳ ಎಂಬ ಅಧಿಕಾರಿಯು ಕಟ್ಟಿದನೆಂದು ಹೇಳಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಸಿಂದಗಿ ಪರಿಸರವು ಮುಖ್ಯವಾಗಿ ಕಲ್ಯಾಣ ಚಾಲುಕ್ಯ, ಕಳಚುರಿ ಹಾಗೂ ಯಾದವ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಚಾಲುಕ್ಯ ಅರಸರಾದ ಎರಡನೇ ಜಯಸಿಂಹ, ಒಂದನೇ ಸೋಮೇಶ್ವರ, ಆರನೇ ವಿಕ್ರಮಾದಿತ್ಯ, 3ನೇ

* **ಡಾ. ಎನ್.ಪಿ. ಕೋಟಿ,** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಜಗದಂಬಾ ಪ್ರಥಮ ದರ್ಜೆ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಹಿಟ್ಟನಹಳ್ಳಿ ಎಲ್.ಟಿ.

ಸೋಮೇಶ್ವರ ಮುಂತಾದ ಅರಸರ ಆಡಳಿತಾವಧಿಯಲ್ಲಿ ಈ ಪ್ರದೇಶವು ಆಡಳಿತಾತ್ಮಕವಾಗಿ, ಸಾಂಸ್ಕೃತಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದ್ದು ಇಲ್ಲಿ ಲಭ್ಯವಿರುವ ದೇವಾಲಯಗಳು ಹಾಗೂ ಸ್ಮಾರಕಗಳಿಂದ ಗಮನಿಸಬಹುದಾಗಿದೆ. ಕಲ್ಯಾಣಿ ಚಾಲುಕ್ಯರ ಹಲವು ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಶಾಸನಗಳನ್ನು ಅನುಲಕ್ಷಿಸಿ ಚಟ್ಟರಕಿಯ ದತ್ತಾತ್ರೇಯ ದೇವಾಲಯ, ಕೊಂಡುಗುಳಿಯ ಸೋಮೇಶ್ವರ ದೇವಾಲಯ, ಜಾಲವಾದದ ಶಂಕರಲಿಂಗ ದೇವಾಲಯ, ದೇವಣಗಾಂವದ ಕಲ್ಲಾಲಿಂಗ ದೇವಾಲಯ ಮುಂತಾದ ದೇವಾಲಯಗಳು ಇವರ ಕಾಲದ ವಾಸ್ತುಶಿಲ್ಪದ ಜೀವಂತ ಸಾಕ್ಷಿಗಳಾಗಿವೆ.

**ಕಲ್ಯಾಣಿ ಚಾಲುಕ್ಯರ ಶಾಸನೋಕ್ತ ದೇವಾಲಯಗಳು:**

ಚಟ್ಟರಕಿಯ ದತ್ತಾತ್ರೇಯ ದೇವಾಲಯ : ಸಿಂದಗಿಯಿಂದ 20 ಕಿ. ಮೀ ದೂರದಲ್ಲಿರುವ ಚಟ್ಟರಕಿಯು ಶಾಸನಗಳಲ್ಲಿ 'ಅಗ್ರಹಾರ ಚಟ್ಟುರಗೆ' ಎಂದು ಉಲ್ಲೇಖಿಸಲ್ಪಟ್ಟಿರುವ ಪ್ರಾಚೀನ ಸ್ಥಳವಾಗಿದೆ. ಊರಿನಲ್ಲಿರುವ ದತ್ತಾತ್ರೇಯ ದೇವಾಲಯವು ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದ್ದು ಅತ್ಯಂತ ಆಕರ್ಷಕ ಕಟ್ಟಡವಾಗಿದೆ. ಇದರಲ್ಲಿ ಎತ್ತರವಾದ ಅಧಿಷ್ಠಾನವಿದ್ದು, ಗರ್ಭಗೃಹ, ಅರ್ಧಮಂಟಪ, ವಿಶಾಲವಾದ ನವರಂಗ ಹಾಗೂ ಪ್ರತ್ಯೇಕವಾದ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಪ್ರವೇಶದ್ವಾರವು ಚತುರ್‌ಶಾಖಾ ಅಲಂಕಾರವನ್ನು ಹೊಂದಿದ್ದು ಚಾಳುಕ್ಯಶೈಲಿಯಲ್ಲಿ ನಿರ್ಮಿತವಾಗಿದೆ. ಈ ಬಾಗಿಲುವಾಡದ ಲಲಾಟದಲ್ಲಿ ಆಸೀನ ಲಕ್ಷ್ಮಿಯ ಬಿಂಬವಿದೆ.

ಗರ್ಭಗೃಹದಲ್ಲಿ ಚೌರಸ ಪಾಣಿಪೀಠವಿದ್ದು ಮೇಲೆ ಸಮಭಂಗಿಯಲ್ಲಿ ನಿಂತಿರುವ ಸು. 1.5 ಮೀ ಎತ್ತರದ ಹರಿಹರನ ಮೂರ್ತಿಯಿದ್ದು ತನ್ನ ಆರು ಕೈಗಳಲ್ಲಿ ಶಂಖ, ಚಕ್ರ, ತ್ರಿಶೂಲ, ಡಮರುಗಳನ್ನು ಹಿಡಿದಿದ್ದು ಕಮಂಡಲ ಮತ್ತು ಕಟೀಹಸ್ತನಾಗಿರುವನು. ಈ ಮೂರ್ತಿಯನ್ನು ಸ್ಥಳೀಯವಾಗಿ ದತ್ತಾತ್ರೇಯನೆಂದು ಕರೆಯಲಾಗುತ್ತದೆ. ಅರ್ಧಮಂಟಪದ ಬಾಗಿಲುವಾಡವೂ ಚಾಳುಕ್ಯ ಶೈಲಿಯಲ್ಲಿದ್ದು ಇಕ್ಕೆಲಗಳಲ್ಲಿ ಎರಡು ಅಲಂಕೃತ ಸ್ತಂಭಗಳಿವೆ. ನವರಂಗ ವಿಶಾಲವಾಗಿದ್ದು ಮಧ್ಯದಲ್ಲಿರುವ ನಾಲ್ಕು ಸ್ತಂಭಗಳು ಅಲಂಕೃತವಾಗಿದ್ದು ಮೇಲ್ಭಾಗದ ಬೋದಿಗೆಗಳಲ್ಲಿ ಕುಬ್ಜರ ವಿಗ್ರಹಗಳಿವೆ. ಸ್ತಂಭಗಳ ಮಧ್ಯದಲ್ಲಿ ವೃತ್ತಾಕಾರವಾದ ನಾಟ್ಯಮಂಟಪವಿದೆ. ನವರಂಗದಲ್ಲಿ ದೇವಕೋಷ್ಠಗಳಿದ್ದು ಬಲಭಾಗದ ದೇವಕೋಷ್ಠದಲ್ಲಿ ಸಪ್ತಮಾತೃಕೆಯರ ಜೋಡುಶಿಲ್ಪವಿದೆ.

ನವರಂಗಕ್ಕೆ ಮೂರು ಪ್ರವೇಶದ್ವಾರಗಳಿದ್ದು ಮುಂಭಾಗದಲ್ಲಿ ಕಕ್ಷಾಸನವಿರುವ ಮೂರು ಮುಖ ಮಂಟಪಗಳಿವೆ. ಮುಖ ಮಂಟಪದ ಎತ್ತರವಾದ ಅಧಿಷ್ಠಾನಕ್ಕೆ ಹಲವು ಮೆಟ್ಟಲುಗಳ ಮೂಲಕ ಪ್ರವೇಶಿಸಬೇಕಾಗುತ್ತದೆ. ನವರಂಗದ ಛತ್ತಿನಲ್ಲಿ ಆಳವಾದ ಭುವನೇಶ್ವರಿ ಇದ್ದು ಕೆಳಮುಖ ಮಾಡಿರುವ ಕಮಲದ ಹೂವಿನ ಕೆತ್ತನೆ ಇದೆ. ಮುಖ್ಯ ದೇವಾಲಯದ ಮುಂಭಾಗದಲ್ಲಿ ತೆರೆದ ಜಾಗವಿದ್ದು ಎದುರಿಗೆ ಪ್ರತ್ಯೇಕ ಮುಖಮಂಟಪವು ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿತವಾಗಿದೆ. ಈ ಮಂಟಪಕ್ಕೆ ಎರಡು ಪ್ರವೇಶದ್ವಾರಗಳಿದ್ದು ಮಧ್ಯದಲ್ಲಿ ನಾಲ್ಕು ಚೌರಸವಾದ ಅಲಂಕೃತ ಸ್ತಂಭಗಳಿವೆ, ಇದರ ಛತ್ತಿನಲ್ಲಿ ಆಳವಾದ ಭುವನೇಶ್ವರಿಯಿದ್ದು ಮಧ್ಯದಲ್ಲಿ ಕೆಳಮುಖ ಮಾಡಿರುವ ಕಮಲದ ಹೂವಿನ ಕೆತ್ತನೆಯನ್ನು ಹೊಂದಿದೆ. ಮುಖ್ಯ ದೇವಾಲಯದ ಹೊರಭಾಗದ ನಕ್ಷತ್ರಾಕಾರದ ಚೈತ್ಯದ ಗೂಡುಗಳಿರುವ ಗೋಡೆಯಲ್ಲಿ ಆಕರ್ಷಕ ನರ್ತನ ಭಂಗಿಗಳಲ್ಲಿರುವ ಸ್ತ್ರೀ ವಿಗ್ರಹಗಳು, ವಿಷ್ಣು, ವಾಮನ ಮೊದಲಾದ ಅಲಂಕಾರವಿದ್ದು ಪ್ರಸ್ತುತ ಕೇಂದ್ರ ಪುರಾತತ್ವ ಇಲಾಖೆಯವರ ವತಿಯಿಂದ

ಸಂರಕ್ಷಣಾ ಕಾರ್ಯವು ಜಾರಿಯಲ್ಲಿದೆ.

**ಕೊಂಡಗುಳಿಯ ಸೋಮೇಶ್ವರ ದೇವಾಲಯ:** ಸಿಂದಗಿಯಿಂದ 20 ಕಿ ಮೀ ನೈಋತ್ಯಕ್ಕಿರುವ ಶಾಸನೋಕ್ತ ಕೊಂಡುಗುಳಿಯು ರಾಜ್ಯದಲ್ಲಿರುವ ಅತ್ಯಂತ ಪ್ರಾಚೀನ ಸ್ಥಳಗಳಲ್ಲೊಂದಾಗಿದೆ. ಊರಿನಲ್ಲಿ ಸೋಮೇಶ್ವರ, ಬಸವಣ್ಣ, ಹನುಮಂತ ಮೊದಲಾದ ದೇವಾಲಯಗಳಿದ್ದು ಸೋಮೇಶ್ವರ ದೇವಾಲಯವನ್ನು ಸ್ಥಳೀಯವಾಗಿ ನೆಲಗುಡಿ ಎಂದು ಕರೆಯಲಾಗಿದ್ದು ನೆಲಮಟ್ಟದಿಂದ ಕೆಳಗಿದ್ದು ಕಲ್ಯಾಣ ಚಾಳುಕ್ಯ ಶೈಲಿಯ ವಾಸ್ತು ರಚನೆಯಾಗಿದೆ. ಇದರಲ್ಲಿ ಚೌರಸವಾದ ಗರ್ಭಗೃಹವಿದ್ದು ಎತ್ತರವಾದ ಪಾಣಿಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಮುಂಭಾಗದ ಅರ್ಧಮಂಟಪದಲ್ಲಿ ಕಲ್ಯಾಣದ ಚಾಳುಕ್ಯರ ಎರಡು ಸ್ತಂಭಗಳಿವೆ.

ಇದರ ಮುಂಭಾಗದಲ್ಲಿರುವ ನವರಂಗವು ವಿಶಾಲವಾಗಿದ್ದು ಮಧ್ಯದಲ್ಲಿ ನಾಲ್ಕು ಅಲಂಕೃತ ಸ್ತಂಭಗಳಿವೆ. ಅರ್ಧಮಂಟಪದ ಪ್ರವೇಶದ್ವಾರದಲ್ಲಿ ನಾಲ್ಕು ಅಲಂಕೃತ ಲಲಾಟದಲ್ಲಿ ಮಕರ ತೋರಣ ಹಾಗೂ ನಟರಾಜನ ಸುಂದರ ಶಿಲ್ಪಗಳಿವೆ. ನವರಂಗದ ಮುಂಭಾಗದಲ್ಲಿ ಮುಖಮಂಟಪವಿದ್ದು ಸುತ್ತಲೂ ಕಕ್ಷಾಸನವನ್ನು ಹೊಂದಿದೆ, ಇದರ ಮಧ್ಯದಲ್ಲಿ ಏಕಶಿಲಾ ನಂದಿಯಿದೆ.

ಈ ಊರನ್ನು ಪ್ರಸಿದ್ಧ ಕನ್ನಡದ ಕವಿ ಕೇಶಿರಾಜನ ತವರೂರು ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಶಾಸನಗಳು ಅಧಿಕವಾಗಿ ಇಲ್ಲಿ ದೊರೆತಿದ್ದು ಈ ಸ್ಥಳವನ್ನು ಸರ್ವಮಾನ್ಯ ಅಗ್ರಹಾರವೆಂದು ಉಲ್ಲೇಖಿಸುತ್ತದೆ. ಊರಿನ ಹೊರಗೆ ಇರುವ ಬಾವಿ ಬಾಂದಿಗೆ ಕಟ್ಟಲಾಗಿರುವ ಸ್ತಂಭದ ಮೇಲೆ 6ನೇ ವಿಕ್ರಮಾದಿತ್ಯನ ಕ್ರಿ.ಶ 1107ರ ಶಾಸನವಿದ್ದು ಬಹಳಷ್ಟು ಭಾಗ ಅಳಿಸಿ ಹೋಗಿದೆ. ಈ ಶಾಸನವು ಮಹಾಪ್ರಧಾನ ಹೇರಿಲಾಳ ಸಂಧಿವಿಗ್ರಹಿ ದಂಡನಾಯಕ ಕೇಶಿರಾಜರಸರು ತಾವು ಮಾಡಿಸಿದ ಶಿವಾಲಯದ ಮೂಲಸ್ಥಾನ ಸೋಮೇಶ್ವರ ದೇವರಿಗೆ ದತ್ತಿ ನೀಡಿದ ವಿವರಣೆಯಿದೆ. ಇಲ್ಲಿನ ಕೇಶಿರಾಜನು ಅನುಭಾವ, ಸಾಹಿತ್ಯ, ಮತ್ತು ರಾಜಕಾರ್ಯಗಳ ತ್ರಿವೇಣಿ ಸಂಗಮನಾಗಿದ್ದು ವೀರಶೈವ ಮತದ ಪ್ರಥಮ ಕವಿ ಎಂಬ ತರ

ಇದೇ ಸ್ಥಳದಲ್ಲಿರುವ ಬಿಜ್ಜಳನ ಕ್ರಿ.ಶ 1166 ಶಾಸನವು ಅಗ್ರಹಾರ ಕೊಂಡುಗುಳಿಯ ಮಹಾಜನಗಳು, ನಖರಗಳು ಹಾಗೂ ಇತರ ವರ್ತಕರುಗಳು ಊರಿನ ದೇವಾಲಯಗಳ ಪೂಜಾವಿಧಿಗೆಂದು ನೀಡಿದ ವಿವಿಧ ದಾನಗಳನ್ನು ದಾಖಲಿಸುತ್ತದೆ. ಈ ಶಾಸನವು ಚಾಳುಕ್ಯ ದೊರೆಯು ಕಲ್ಯಾಣದಿಂದ ಆಳುತ್ತಿದ್ದುದರ ಬಗ್ಗೆ ಉಲ್ಲೇಖಿಸುತ್ತದೆ.

**ದೇವರ ಹಿಪ್ಪರಗಿ:** ಸಿಂದಗಿಯಿಂದ ನೈಋತ್ಯಕ್ಕೆ 23 ಕಿ.ಮೀ ದೂರದಲ್ಲಿರುವ ಹಿಪ್ಪರಗಿ ಅಥವಾ ದೇವರ ಹಿಪ್ಪರಗಿಯು ಶಾಸನಗಳಲ್ಲಿ 'ಹಿಪ್ಪರಗೆ', 'ಹಿಪ್ಪರಗಿಗೆ' ಎಂದು ಉಲ್ಲೇಖಗೊಂಡಿದೆ. ಊರಿನಲ್ಲಿ ಮಲ್ಲಿಕಾರ್ಜುನ, ರಾವುತರಾಯ, ಕಲ್ಮೇಶ್ವರ, ಕರಿದೇವರು, ಮಡಿವಾಳ ವೀರಭದ್ರ ಮುಂತಾದ ದೇವಾಲಯಗಳಿವೆ. ಊರಿನಲ್ಲಿರುವ ಕಲ್ಮೇಶ್ವರ ಅಥವಾ ಶಾಸನೋಕ್ತ ಕಲಿದೇವರ ದೇವಾಲಯವು ವಿಶಾಲವಾದ ನಿವೇಶನದಲ್ಲಿ ಕಲ್ಯಾಣ ಚಾಳುಕ್ಯರ ಪ್ರಾರಂಭದ ಕಾಲದ ವಾಸ್ತು ರಚನೆಯನ್ನು ಹೊಂದಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಂಭಾಗದಲ್ಲಿ ತೆರೆದ ಮುಖ ಮಂಟಪಗಳಿವೆ. ಗರ್ಭಗೃಹವು ಚೌರಸವಾಗಿದ್ದು ಪ್ರಾಚೀನ ಪಾಣಿಪೀಠದ ಮೇಲೆ ಚಾಳುಕ್ಯರ ಕಾಲಕ್ಕೂ ಹಿಂದಿನ ಲಕ್ಷಣವುಳ್ಳ ಶಿವಲಿಂಗವಿದೆ.

ಗರ್ಭಗೃಹದ ಹೊರಗೋಡೆಗಳು ಪೂರ್ಣವಾಗಿ ದುರಸ್ತಿಗೊಂಡಿದ್ದು ಮೇಲ್ಭಾಗದಲ್ಲಿ

ಆಧುನಿಕ ಶಂಖಾಕಾರದ ಶಿಖರವನ್ನು ಹೊಂದಿದೆ. ನವರಂಗವು ವಿಶಾಲವಾಗಿದ್ದು ಕಲ್ಯಾಣ ಚಾಳುಕ್ಯ ಶೈಲಿಯ ಸ್ತಂಭಗಳಿದ್ದು ಇದರ ಪ್ರವೇಶ ದ್ವಾರದ ಬಲಭಾಗದ ಗೋಡೆಯಲ್ಲಿ ಶಾಸನವಿದೆ. ಈ ಶಾಸನವು ಯಾದವ ಬಿಲ್ಲಮನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ 1192 ರಲ್ಲಿ ಅರಸನು ಕಲಿದೇವರ ದೇವಾಲಯಕ್ಕಾಗಿ ರಾಜಗುರು ದೇವರಿಗೆ ನೀಡಿದ ಇಂಗುಣಿಗೆ ಗ್ರಾಮದಾನ ಮತ್ತು ಮಾಯಿದೇವರ ಬಮ್ಮದೇವ ದಂಡನಾಯಕರಿಂದ ಅದೇ ದೇವಾಲಯಕ್ಕೆ ನೀಡಿದ ಭೂಮಿ, ಎಣ್ಣೆ ಮತ್ತು ತೆರಿಗೆ ದಾನಗಳ ಉಲ್ಲೇಖವಿದೆ. ಇದೇ ದೇವಾಲಯದಲ್ಲಿರುವ ಇನ್ನೊಂದು ಸು. ಕ್ರಿ.ಶ 12ನೇ ಶತಮಾನದ ಲಕ್ಷಣವನ್ನು ವ್ಯಕ್ತಪಡಿಸುವ ಶಾಸನದಲ್ಲಿ ಕೇವಲ ದಂಡನಾಯಕ ಮತ್ತು ಹಿಪ್ಪರಗಿಯ ಉಲ್ಲೇಖವು ಕಂಡುಬರುತ್ತದೆ. ನವರಂಗದ ಮುಂಭಾಗದಲ್ಲಿರುವ ಮುಖ ಮಂಟಪಕ್ಕೆ ಮೂರು ಪ್ರವೇಶದ್ವಾರಗಳಿದ್ದು ಸುತ್ತಲೂ ಕಕ್ಷಾಸನವಿದೆ. ಇಲ್ಲಿರುವ ನಾಲ್ಕು ಚೌರಸ ಸ್ತಂಭಗಳ ಮಧ್ಯದಲ್ಲಿ ನಂದಿಯ ಏಕಶಿಲಾ ಶಿಲ್ಪವಿದೆ. ನವರಂಗದ ಪ್ರವೇಶದ್ವಾರದಲ್ಲಿ ಚಾಳುಕ್ಯ ಶೈಲಿಯ ತ್ರಿಶಾಖಾ ಅಲಂಕಾರವಿದೆ. ಮುಖಮಂಟಪದ ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ಕಳಶಗಳ ಅಲಂಕಾರವಿದೆ.

**ಜಾಲವಾದದ ಶಂಕರಲಿಂಗ ದೇವಾಲಯ:** ಜಾಲವಾದ ಹಿಪ್ಪರಗಿಯ ಪೂರ್ವಕ್ಕೆ 10 ಕಿ.ಮೀ ದೂರದಲ್ಲಿದೆ. ಇಲ್ಲಿ ಪ್ರಾಚೀನ ಕಾಲದ ಕಲ್ಯಾಣಿ ಚಾಲುಕ್ಯರ ದೇವಾಲಯವಾದ ಶಂಕರಲಿಂಗನೆಂದು ಕರೆಯಲಾಗುತ್ತಿದ್ದು ಗ್ರಾಮದ ಮಧ್ಯಭಾಗದಲ್ಲಿ ಪೂರ್ವಕ್ಕೆ ಮುಖಮಾಡಿ ಕಟ್ಟಲ್ಪಟ್ಟಿದೆ. ಈ ಗುಡಿಯ ಮುಂದೆ ಚಾಲುಕ್ಯರ ಎರಡು ಶಾಸನಗಳು ಕಂಡುಬಂದಿವೆ. ಅವುಗಳು ತುಂಬಾ ವಿರೂಪಗೊಂಡಿರುವುದರಿಂದ ಯಾವುದೇ ಮಾಹಿತಿ ಸಿಗುವುದಿಲ್ಲ. ಶಂಕರಲಿಂಗ ದೇವಾಲಯ ತಳವಿನ್ಯಾಸದಲ್ಲಿ ಏಕಕೂಟ ಮಾದರಿಯಲ್ಲಿದ್ದು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳನ್ನು ಹೊಂದಿದ್ದು ಗರ್ಭಗೃಹ ಚೌಕಾಗಿದ್ದು ಮಧ್ಯದಲ್ಲಿ ಲಿಂಗವಿದೆ. ದ್ವಾರಗಳಲ್ಲಿ ಶೈವದ್ವಾರಪಾಲಕರು, ಚೌರಿಯರು, ಹೂ, ಕೋನಾಕಾರ ಅರ್ಧಗಂಬಗಳು, ಮಂಗಲ ಫಲಕ, ಸಿಂಹದ ಸಾಲನ್ನು ಗರ್ಭದ್ವಾರದ ಮೇಲೆ ಹೊಂದಿದೆ. ಅಂತರಾಳದಲ್ಲಿ ತ್ರಿಕೋನ ಮಾದರಿಯ ಪದ್ಮದ ಅಲಂಕಾರವಿದೆ. ಅಂತರಾಳದ್ವಾರವು ಸುಂದರಾಲಂಕಾರದಿಂದ ಕೂಡಿದ್ದು ದ್ವಾರಗಳಲ್ಲಿ ಅರ್ಧಗಂಬ, ಚೌರಶಿಲ್ಪಗಳು, ದ್ವಾರದ ಪಾರ್ಶ್ವಗಳಲ್ಲಿ ಹೂ ಅಲಂಕೃತ ಜಾಲಂಧ್ರಗಳಿವೆ. ಮಂಗಲ ಫಲಕದಲ್ಲಿ ಅಂತರಾಳದ ದ್ವಾರದ ಮೇಲೆ ಮಕರ ತೋರಣ ಅಲಂಕಾರವಿದ್ದು ಅಪಸ್ಮಾರ ಪುರುಷನ ಮೇಲೆ ನರ್ತಿಸುವ ನಟರಾಜ, ಅವನ ಎರಡು ಬಾಹು ಅಂಜಲಿ ಮುದ್ರೆಯಲ್ಲಿ ನಿಂತ ಬ್ರಹ್ಮ, ವಿಷ್ಣು, ಸಂಗೀತ ನೃತ್ಯ ಶಿಲ್ಪಗಳ ಜೊತೆಗೆ ಬಳಗ ಅಲಂಕಾರವಾಗಿ ಚಿತ್ರಿತವಾಗಿವೆ. ಮೇಲೆ ಜೋಡಿ ದಿಕ್ಪಾಲಕರ ಶಿಲ್ಪಗಳಿವೆ.

ನವರಂಗದ ಮಧ್ಯ ಭುವನೇಶ್ವರಿಯು ಸಾಧಾ ಕಮಲದ ಅಲಂಕಾರದಿಂದ ಕೂಡಿದ್ದು ನವರಂಗದ ಗೋಡೆಯಲ್ಲಿ ಪೂರ್ವಕ್ಕೆ ಮುಖ ಮಾಡಿದ ಎರಡು ಕೋಷ್ಠಕಗಳಿವೆ, ನವರಂಗದಲ್ಲಿ ಇತ್ತೀಚಿನ ನಂದಿವಿಗ್ರಹವಿದೆ. ನವರಂಗದ ಹೊರಗೋಡೆ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದ ಗೋಡೆ ನಕ್ಷತ್ರದ ಹಾಗೆ ಕಂಡುಬರುತ್ತಿದ್ದು ಗರ್ಭಗೃಹದ ಗೋಡೆ ನಕ್ಷತ್ರದ ಹಾಗೆ ಕಂಡು ಬರುತ್ತಿದ್ದು ಗರ್ಭಗೃಹದ ಹೊರಗೋಡೆಯಲ್ಲಿ ಕೋಷ್ಠಕಗಳಿವೆ. ಕೋಷ್ಠಗಳ ಮೇಲೆ ರೇಖಾನಾಗರ ಪ್ರಸಾದ ಶಿಖರಗಳಿದ್ದು ಶಿಖರಗಳ ಮಗ್ಗಲಿಗೆ ಹಿಂಗಾಲು ಮೇಲೆ ಸಿಂಹ ಶಿಲ್ಪಗಳಿವೆ. ದೇವಾಲಯ ಶಿಥಿಲಗೊಂಡ ಗುಡಿಯನ್ನು ಗ್ರಾಮಸ್ಥರು ಅದರ ಮಹತ್ವ ಅರಿತುಕೊಂಡು ಜೀರ್ಣೋದ್ಧಾರ ಮಾಡಿರುತ್ತಾರೆ.

**ದೇವಣಗಾಂವದ ಕಲ್ಲಾಲಿಂಗ ದೇವಾಲಯ:** ಸಿಂದಗಿಯಿಂದ 30 ಕಿ.ಮೀ

ದೂರದಲ್ಲಿರುವ ದೇವಣಗಾಂವ್ ಕಲ್ಯಾಣ ಚಾಳುಕ್ಯ ಶೈಲಿಯ ಕಲ್ಲಾಲಿಂಗ ದೇವಾಲಯದಿಂದಾಗಿ ಪ್ರಸಿದ್ಧಿಯಾಗಿದೆ. ಈ ದೇವಾಲಯವು ದ್ವಿಕೂಟಾಚಲವಾಗಿದ್ದು ಮೂಲಗರ್ಭಗೃಹವು ಪೂರ್ವಾಭಿಮುಖವಾಗಿದೆ. ಇದರಲ್ಲಿ ಎರಡು ಗರ್ಭಗೃಹಗಳು, ಒಂದು ಅರ್ಧಮಂಟಪ, ವಿಶಾಲವಾದ ನವರಂಗ ಹಾಗೂ ಉತ್ತರಕ್ಕೆ ಕಿರಿದಾದ ಮುಖಮಂಟಪಗಳಿವೆ. ಮೂಲಗರ್ಭಗೃಹವು ಚೌರಸವಾಗಿದ್ದು ಎತ್ತರವಾದ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಇದರ ಬಾಗಿಲುವಾಡವು ಅಲಂಕೃತವಾಗಿದ್ದು ಇದರ ಮೇಲ್ಭಾಗದಲ್ಲಿ ನರ್ತಿಸುತ್ತಿರುವ ನಟರಾಜನ ಸುಂದರ ಶಿಲ್ಪವಿದೆ. ಅಂತರಾಳವು ಅಲಂಕೃತ ಬಾಗಿಲುವಾಡವನ್ನು ಹೊಂದಿದ್ದು ಇಕ್ಕೆಲಗಳಲ್ಲಿ ದೇವಕೋಷ್ಠಗಳಿದ್ದು ಖಾಲಿಯಿವೆ. ನವರಂಗದ ಮಧ್ಯದಲ್ಲಿ ನಾಲ್ಕು ಅಲಂಕೃತ ಸ್ತಂಭಗಳಿದ್ದು ನಡುವೆ ನಂದಿ ಇದೆ. ನವರಂಗದ ಬಲಭಾಗದಲ್ಲಿರುವ ಗರ್ಭಗೃಹವು ಉತ್ತರಾಭಿಮುಖವಾಗಿದ್ದು ಮಲ್ಲಿಕಾರ್ಜುನ ಲಿಂಗವಿದೆ. ನವರಂಗದ ಪೂರ್ವ ಹಾಗೂ ಉತ್ತರಕ್ಕೆ ಪ್ರವೇಶ ದ್ವಾರಗಳಿವೆ. ದೇವಾಲಯದ ಹೊರಭಾಗವು ವಿಶಾಲವಾಗಿದ್ದು ಗರ್ಭಗೃಹದ ಸುತ್ತಲೂ ಹೊರಗೋಡೆಯ ಮೇಲೆ ಸಪ್ತಮಾತೃಕೆಯರ ಜೋಡುಶಿಲ್ಪ, ಧ್ಯಾನಾಸಕ್ತನಾದ ಶಿವ, ಮನ್ಮಥ ಮೊದಲಾದ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಶಿಥಿಲವಾದ ಕದಂಬ ನಾಗರ ಶಿಖರವಿದೆ. ಈ ದೇವಾಲಯದಲ್ಲಿ ಮೂರು ಶಾಸನಗಳಿದ್ದು ಮೊದಲನೆಯದು 1199 ರಲ್ಲಿ ಕೇಸರ್ಪಟಿಯ ಕಲಿದೇವ ದೇವಾಲಯಕ್ಕೆ ಮಗರ ಮುರಾರಿ ಸೋಯಿದೇವನಾಯಕನ ಭೂದಾನವನ್ನು ಉಲ್ಲೇಖಿಸುತ್ತದೆ. ಇಲ್ಲಿರುವ ಎರಡನೇ ಶಾಸನವು ಯಾದವ ಸಿಂಘಣನ ಆಳ್ವಿಕೆಯ ಕಾಲದಲ್ಲಿ ಮಗರ ಮುರಾರಿ ಸೋಯಿದೇವ ಮುಮ್ಮರಿದಂಡ ಮತ್ತು ಮಹಾಜನರಿಂದ ಕೇಸರ್ಪಟಿಯ ಕಲಿದೇವಾಲಯಕ್ಕೆ ಹಲವು ದಾನಗಳನ್ನು ದಾಖಲಿಸುತ್ತದೆ. ಇಲ್ಲಿರುವ ಮೂರನೇ ಶಾಸನವು ಅರಕಾಡ ಮತ್ತು ರಾಜಾಧಿರಾಜ ಮುರಾರಿ ಪಂಡಿತೇಶ್ವರ ನಡುವೆ ಭೀಮಾರತಿ ನದಿ ದಂಡೆಯ ಮೇಲೆ ನಡೆದ ಯುದ್ಧದ ಬಗ್ಗೆ ಉಲ್ಲೇಖಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಮುನಿಸ್ವಾಮಿ (ಮುಖ್ಯ ಸಂಪಾದಕರು), (1884-1896), ಬಾಂಬೆ ಮತ್ತು ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಬೆಂಗಳೂರು: ಕರ್ನಾಟಕ ರಾಜ್ಯ ಸರಕಾರ.
2. ಕೊಪ್ಪಾ ಎಸ್. ಕೆ., (1990), ತರ್ದವಾಡಿ ನಾಡು ಒಂದು ಅಧ್ಯಯನ, ಇಂಡಿ: ಪ್ರತಿಭಾ ಪ್ರಕಾಶನ.
3. ಷೇಕ್ ಅಲಿ ಬಿ. (ಪ್ರಧಾನ ಸಂಪಾದಕರು), (2018), ಕರ್ನಾಟಕ ಚರಿತ್ರೆ ಸಂಪುಟ-4, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ಕಡಕೋಳ ಎಚ್. ಎಂ., (2010), ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ಬಿಜಾಪುರ: ಕನ್ನಡ ಸಾಹಿತ್ಯ ಪರಿಷತ್ತು.
5. ಡಾ. ದೇವರಕೊಂಡಾರೆಡ್ಡಿ, (2011), ಬಿಜಾಪುರ ಜಿಲ್ಲೆಯ ಶಾಸನಸೂಚಿ, ಹಂಪಿ (ವಿದ್ಯಾರಣ್ಯ): ಕನ್ನಡ ವಿಶ್ವವಿದ್ಯಾಲಯ.
6. ಸುರೇಶ್ ಭೀ. ಹೂಗಾರ, ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳು, ಬೆಂಗಳೂರು: ವಾಸನ್ ಪಬ್ಲಿಕೇಶನ್ಸ್.
7. ಕೋಟಿ ಎನ್. ಪಿ., ವಿಜಯಪುರ ಜಿಲ್ಲೆಯ ಐತಿಹಾಸಿಕ ಪ್ರವಾಸಿತಾಣಗಳ ಹಿನ್ನೆಲೆ ಒಂದು ಸಾಂಸ್ಕೃತಿಕ ಅಧ್ಯಯನ (ಸಂಶೋಧನಾ ಪ್ರಬಂಧ).
8. ಅಣ್ಣಿಗೇರಿ ಎ.ಎಂ., ಬಿಜಾಪುರದ ಶಿಲ್ಪ ಕಲಾ ವೈಭವ, ಧಾರವಾಡ.